ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :—

ಅ) 1996-97, 97-98 ಮತ್ತು 98-99ನೇ ಸಾಲಿನವರೆಗೆ ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 19 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗಿದೆ ಅಂಗನವಾಡಿ ಕಟ್ಟಡಗಳ ವಿವರಗಳನ್ನು ಹಾಗೂ ಇವುಗಳಿಗೆ ವ್ಯಯಿಸಲಾದ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು. 106 ಅಂಗನವಾಡಿ ಕೇಂದ್ರಗಳಿಗೆ ಕಟ್ಟಡ ಇರುವುದಿಲ್ಲ. ಅಂಗನವಾಡಿ ಕಟ್ಟಡಗಳನ್ನು ಹಂತಹಂತವಾಗಿ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

*ಮಾಗಡಿಯ ಶ್ರೀರಂಗನಾಥಸ್ವಾಮಿ ದೇವಾಲಯದ ಅಭಿವೃದ್ಧಿ.*

121(272) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಮಾಗಡಿ ಶ್ರೀ ರಂಗನಾಥಸ್ವಾಮಿ ದೇವಾಲಯದ ಅಭಿವೃದ್ಧಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದವರು ಪರಿಶೀಲಿಸುವರೆ.

2) ಹಾಗಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :—

1) ಈವರೆಗೆ ದೇವಾಲಯದ ಅಭಿವೃದ್ಧಿ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಬಂದಿರುವುದಿಲ್ಲ. ಸ್ಥಳೀಯ ಭಕ್ತಾದಿಗಳು ಮುಂದೆ ಒಂದು ದೇವಾಲಯದ ಅಭಿವೃದ್ಧಿಗೆ ಅನುದಾನ ಕೋರಿ ನಿಯಮಾನುಸಾರ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿದ್ದಲ್ಲಿ ಪರಿಶೀಲಿಸಲಾಗುವುದು.

2) ಪ್ರಶ್ನೆ ಉದ್ಭವಿಸುವುದಿಲ್ಲ.

*ಮಾಗಡಿ ಕ್ಷೇತ್ರಕ್ಕೆ ಕೃಷಿ ಇಲಾಖೆಯಿಂದ ಅಭಿವೃತಿ ಕಾಮಗಾರಿ.*

122(273) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಕೃಷಿ ಹಾಗೂ ತೋಟಗಾರಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1994-1996ನೇ ಸಾಲಿನಿಂದ 1998-99ನೇ ಸಾಲಿನವರೆಗೆ ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕೃಷಿ ಇಲಾಖೆಯಿಂದ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ವಿವಿಧ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ. ಸದರಿ ಯೋಜನೆಗಳಿಗೆ ವ್ಯಯಿಸಿದ ಹಣವೆಷ್ಟು? (ವಿವರ ನೀಡುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಹಾಗೂ ತೋಟಗಾರಿಕ ಸಚಿವರು) :—

ಅ) 1994-95ನೇ ಸಾಲಿನಿಂದ 1998-99ರ ಫೆಬ್ರವರಿ ಮಾಹೆಯವರೆಗೆ ಕೃಷಿ ಇಲಾಖೆಯ ವತಿಯಿಂದ ರಾಜ್ಯವಲಯ, ಜಿಲ್ಲಾವಲಯ, ಹಾಗೂ ಇತರ ಮೂಲಗಳಿಂದ

ಬೆಳೆ ಸಂಗೋಪನಾ ಮಣ್ಣು ಮತ್ತು ನೀರಿನ ಸಂರಕ್ಷಣೆ ಹಾಗೂ ಜಲಾನಯನ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಸದರಿ ಯೋಜನೆಗಳಿಗೆ ಮತ್ತು ಸದರಿ ಅವಧಿಯಲ್ಲಿ ರೂ. 337.933 ಲಕ್ಷಗಳನ್ನು ಮಾಡಲಾಗಿದೆ. ವಿವರಗಳನ್ನು ಅನುಬಂಧ-1 ಮತ್ತು 2 ರಲ್ಲಿ ನಮೂದಿಸಲಾಗಿದೆ.

ಅನುಬಂಧ-1

ಬೆಳೆ ಸಂಗೋಪನೆ ವಿವಿಧ ಯೋಜನೆಯಲ್ಲಿ ಸಾಧಿಸಿದ ಪ್ರಗತಿ ವಿವರ
1994-95 ರಿಂದ 1998-99ನೆ ಫೆಬ್ರವರಿ ಮಾಹೆಯವರೆಗೆ

| ಕ್ರ.ಸಂ. | ಯೋಜನೆಯ ಹೆಸರು | ಸಾಧನೆ | |
|---|---|---|---|
| | | ಬೌತಿಕ (ಸಂಖ್ಯೆ) | ಆರ್ಥಿಕ (ಲಕ್ಷ ರೂ.ಗಳಲ್ಲಿ) |
| | ಅ. ಜಿಲ್ಲಾವಲಯ ಯೋಜನೆಗಳು | | |
| 1) | ಹಸಿರು ಮತ್ತು ಮಿಶ್ರ ಗೊಬ್ಬರ | 29 | 0.214 |
| 2) | ಸಸ್ಯ ಸಂರಕ್ಷಣೆ | 989 | 1.975 |
| 3) | ಸಮಗ್ರ ಏಕದಳ ಅಭಿವೃದ್ಧಿ ಯೋಜನೆ | 923 | 4.277 |
| 4) | ರಾಷ್ಟ್ರೀಯ ದ್ವಿದಳಧಾನ್ಯ ಅಭಿವೃದ್ಧಿ ಯೋಜನೆ | 411 | 1.718 |
| 5) | ಎಣ್ಣೆಕಾಳು ಅಭಿವೃದ್ಧಿ ಯೋಜನೆ | 1903 | 11.961 |
| 6) | ವಿಶೇಷ ಘಟಕ ಯೋಜನೆ | 106 | 1.715 |
| 7) | ಗಿರಿಜನ ಉಪಯೋಜನೆ | 25 | 0.198 |
| | ಒಟ್ಟು | 4386 | 22.658 |
| | ಆ. ರಾಜ್ಯವಲಯ ಯೋಜನೆಗಳು | | |
| 1) | ವಿಶೇಷ ಘಟಕ ಯೋಜನೆ | 83 | 1.084 |
| 2) | ಗಿರಿಜನ ಉಪಯೋಜನೆ | 54 | 0.529 |
| 3) | ಪವರ್ ಟಿಲ್ಲರ್ | 7 | 1.050 |
| 4) | ಸಸ್ಯ ಸಂರಕ್ಷಣೆ | 1181 | 1.752 |
| 5) | ಸಾವಯವ ಕೃಷಿ ಯೋಜನೆ | 369 | 0.793 |
| 6) | ಕೃಷಿ ಪ್ರಶಸ್ತಿ | 12 | 1.600 |
| | ಒಟ್ಟು | 1706 | 8.868 |
| | ಇತರೆ ಬೆಳೆ ಯೋಜನೆ | -- | 6.251 |
| | ಮಹಾ ಮೊತ್ತ | 6092 | 35.117 |

ಅನುಬಂಧ - 2

ವಿವಿಧ ಮಣ್ಣು ಮತ್ತು ನೀರಿನ ಸಂರಕ್ಷಣೆ ಹಾಗೂ ಜಲಾನಯನ ಕಾರ್ಯಕ್ರಮಗಳಲ್ಲಿ 1994-95 ರಿಂದ 1998-99 ಫೆಬ್ರವರಿ ಮಾಹೆಯವರೆಗೆ ಸಾಧಿಸಿದ ಯೋಜನಾ ವಿವರ

ಭೌತಿಕ ಕಾಮಗಾರಿಗಳ ಸಂಖ್ಯೆ
ಆರ್ಥಿಕ ಲಕ್ಷ ರೂ.ಗಳಲ್ಲಿ

| ಕ್ರ.ಸಂ. | ಯೋಜನೆಯ ಹೆಸರು | ಸಾಧನೆ ಕೃಷಿ ಇಲಾಖೆ | | ಸಾಧನೆ ಖುಷ್ಕಿ ಭೂ ಅಭಿವೃದ್ಧಿ ಮಂಡಳಿ | | ಸಾಧನೆ ಬಯಲು ಸೀಮೆ ಅಭಿವೃದ್ಧಿ ಮಂಡಳಿ | |
|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ದಶಲಕ್ಷ ಬಾವಿ ಯೋಜನೆ | 99 | 38.625 | 82 | 37.392 | - | - |
| 2 | ಜವಹಾರ್ ರೋಜ್‌ಗಾರ್ ಯೋಜನೆ | 06 | 2.986 | - | - | - | - |
| 3 | ಉದ್ಯೋಗ ಭರವಸೆ ಯೋಜನೆ | 90 | 39.925 | 43 | 19.547 | - | - |
| 4 | ವಿಶೇಷ ಘಟಕ ಯೋಜನೆ (ಜಿಲ್ಲಾ ವಲಯ) | 13 | 22.104 | - | - | 3 | 1.130 |
| 5 | ಗಿರಿಜನ ಉಪ ಯೋಜನೆ (ಜಿಲ್ಲಾ ವಲಯ) | 05 | 0.535 | - | - | 2 | 1.380 |
| 6 | ವಿಶೇಷ ಘಟಕ ಯೋಜನೆ (ರಾಜ್ಯ ವಲಯ) | 04 | 0.330 | - | - | - | - |
| 7 | ಗಿರಿಜನ ಉಪ ಯೋಜನೆ (ರಾಜ್ಯ ವಲಯ) | 07 | 0.386 | - | - | - | - |
| 8 | ಗಿರಿಜನ ಉಪ ಯೋಜನೆ (ರಾಜ್ಯ ವಲಯ) | 47 | 23.570 | | | | |
| 9 | ಮಳೆ ಆಶ್ರಿತ ರಾಷ್ಟ್ರೀಯ ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆ | 4+200+19700 | 19.97 | - | - | - | - |
| 10 | ವಿಶ್ವಬ್ಯಾಂಕ್ ನೆರವಿನ ಜಲಾನಯನ ಅಭಿವೃದ್ಧಿ ಯೋಜನೆ | - | - | 243 | 31.345 | - | - |
| 11 | ಗಿರಿಜನ ಉಪ ಯೋಜನೆ (ರಾಜ್ಯ ವಲಯ) | - | - | 14 | 7.030 | . | . |
| 12 | ಗಿರಿಜನ ಉಪ ಯೋಜನೆ (ರಾಜ್ಯ ವಲಯ) | - | - | 14 | 4.350 | - | - |
| | ಒಟ್ಟು | - | 149.612 | | 150.394 | - | 2.510 |